**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/179/ಖಾಹುಭ/2017-18/ಶಿಪಿ/ನೇಪಿ-2

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 2/03/2018.

ಇವರಿಗೆ,
ಜಂಟಿ ನಿರ್ದೇಶಕರು,
ಪ್ರಾದೇಶಿಕ ಕಛೇರಿ,
ಕಾಲೇಜು ಶಿಕ್ಷಣ ಇಲಾಖೆ,
ಶಿವಮೊಗ್ಗ.

ಮಾನ್ಯರೆ,

ವಿಷಯ: ಶ್ರೀ ಜಗದ್ಗುರು ಪಂಚಾಚಾರ್ಯ ವಿಶ್ವಧರ್ಮ ವಿದ್ಯಾಪೀಠ (ರಿ), ಹರಿಹರ ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಬರುವ ಎಸ್.ಜೆ.ವಿ.ಪಿ. ಸ್ವಾಯತ್ತ ಪದವಿ ಕಾಲೇಜು, ಹರಿಹರ ಇಲ್ಲಿ ಖಾಲಿಯಿರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಪತ್ರ ಸಂಖ್ಯೆ: ಇಡಿ/240/ಯುಪಿಸಿ/2014 ದಿನಾಂಕ:01/09/2017
2) ತಮ್ಮ ಪತ್ರ ಸಂಖ್ಯೆ:ಕಾಶಿಇ/273/ಎಸ್‌ಜೆವಿಪಿ/ಖಾಹುಭ/2017-18, ದಿನಾಂಕ:04.12.2017
3) ಸರ್ಕಾರದ ಆದೇಶ ಸಂಖ್ಯೆ: ಇಡಿ/37/ಯುಎನ್‌ಇ/2009, ದಿನಾಂಕ:24/12/2009

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ಇಲಾಖಾ ವ್ಯಾಪ್ತಿಗೊಳಪಡುವ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಾಂಕ:31.12.2015ರೊಳಗೆ ವಿವಿಧ ಕಾರಣಗಳಿಂದ ತೆರವಾಗಿರುವ ಬೋಧಕರ ಹುದ್ದೆಗಳನ್ನು ಕೆಲವೊಂದು ಷರತ್ತಿಗೊಳಪಟ್ಟು ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಉಲ್ಲೇಖ(2)ರ ತಮ್ಮ ಪತ್ರದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ವಿಶ್ವಧರ್ಮ ವಿದ್ಯಾಪೀಠ (ರಿ), ಹರಿಹರ ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಬರುವ ಎಸ್.ಜೆ.ವಿ.ಪಿ. ಸ್ವಾಯತ್ತ ಪದವಿ ಕಾಲೇಜು, ಹರಿಹರ ಇಲ್ಲಿ ಖಾಲಿ ಇರುವ ಒಟ್ಟು-15 ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲು ಆಡಳಿತ ಮಂಡಳಿಗೆ ಅನುಮತಿ ನೀಡುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುತ್ತೀರಿ.

ಪರಿಶೀಲಿಸಲಾಗಿ, ಉಲ್ಲೇಖ (2)ರ ತಮ್ಮ ಪತ್ರದಲ್ಲಿನ ಶಿಫಾರಸ್ಸಿನನ್ವಯ ಶ್ರೀ ಜಗದ್ಗುರು ಪಂಚಾಚಾರ್ಯ ವಿಶ್ವಧರ್ಮ ವಿದ್ಯಾಪೀಠ (ರಿ), ಹರಿಹರ ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಬರುವ ಎಸ್.ಜೆ.ವಿ.ಪಿ. ಸ್ವಾಯತ್ತ ಪದವಿ ಕಾಲೇಜು, ಹರಿಹರ ಇಲ್ಲಿ 2017-18ನೇ ಶೈಕ್ಷಣಿಕ ಸಾಲಿನ ಕಾರ್ಯಭಾರಕ್ಕನುಗುಣವಾಗಿ ಖಾಲಿ ಇರುವ ಒಟ್ಟು-10 ಬೋಧಕರ ಹಾಗೂ 01 ದೈಹಿಕ ಶಿಕ್ಷಣ ಬೋಧಕರ ಹುದ್ದೆಗಳನ್ನು ಕೆಲವೊಂದು ನಿಬಂಧನೆಗಳಿಗೊಳಪಟ್ಟು ನಿಯಮಾನುಸಾರ ಭರ್ತಿ ಮಾಡಲು ಆಡಳಿತ ಮಂಡಳಿಗೆ ಈ ಮೂಲಕ ಅನುಮತಿ ನೀಡಲಾಗಿದೆ.

ಆದ್ದರಿಂದ, ಸದರಿ ಹುದ್ದೆಗಳನ್ನು ನಿಗದಿಪಡಿಸಲಾದ ಮೀಸಲಾತಿಯನ್ವಯ ಭರ್ತಿ ಮಾಡಲು ಆಡಳಿತ ಮಂಡಳಿಯು ರಾಜ್ಯ ಮಟ್ಟದ ಎರಡು ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟಿಸಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಿಕೊಂಡು ಅನುಮೋದನೆಗಾಗಿ ತಮ್ಮ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವಂತೆ ಆಡಳಿತ ಮಂಡಳಿಗೆ ತಿಳಿಸುವುದು. ನಂತರ ಆಡಳಿತ ಮಂಡಳಿಯಿಂದ ಸ್ವೀಕೃತಗೊಂಡ ಪ್ರಸ್ತಾವನೆಯನ್ನು ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ಹಾಗೂ ಯು.ಜಿ.ಸಿ ನಿಯಮಗಳನ್ವಯ ತಮ್ಮ ಹಂತದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಆಯ್ಕೆ ಸಮಿತಿ ಮೂಲಕ

Scanned with CamScanner

ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿ ಅನುಮೋದನೆಗಾಗಿ ಸಂಬಂಧಪಟ್ಟ ದೃಢೀಕೃತ ದಾಖಲೆಗಳೊಂದಿಗೆ ಮತ್ತು ತಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ಈ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

| ಕ್ರ. ಸಂ | ವಿಷಯ | ಭರ್ತಿ ಮಾಡಲು ಅನುಮತಿ ನೀಡಿರುವ ಹುದ್ದೆಗಳು | ಹುದ್ದೆ ಭರ್ತಿ ಮಾಡಬೇಕಾದ ಮೀಸಲಾತಿ | ಷರಾ |
|---|---|---|---|---|
| 1 | ಆಂಗ್ಲಭಾಷೆ | 01 | ಪ.ಜಾ. | ಶ್ರೀ. ಬಿ.ವೈ. ಪಾಟೀಲ್ ಇವರ ವಯೋ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ. (ನಿವೃತ್ತಿ ದಿ:31.03.2008). |
| 2 | ರಾಜ್ಯಶಾಸ್ತ್ರ | 01 | ಏಕವ್ಯಕ್ತಿ ವಿಭಾಗ ಮೀಸಲಾತಿ ಅನ್ವಯಿಸುವುದಿಲ್ಲ | ಶ್ರೀ ಬಿ.ಹೆಚ್. ವಿಶ್ವನಾಥ್ ಇವರ ವಯೋ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ. (ನಿವೃತ್ತಿ ದಿ:31.08.2012). |
| 3 | ವಾಣಿಜ್ಯಶಾಸ್ತ್ರ | 03 | ಪ.ಜಾ-1<br>ಜಿ.ಎಂ.-1<br>ಪ.ಪಂ-1 | ಶ್ರೀ ಸಿ.ಜಿ. ಕೊಳಸೂರು ಇವರ ವಯೋ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ. (ನಿವೃತ್ತಿ ದಿ:31.07.2007).<br>ಶ್ರೀ.ಎಸ್.ಎಂ. ಸೊಪ್ಪಣ್ಣವರ್ಇವರ ವಯೋ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ. (ನಿವೃತ್ತಿ ದಿ:30.11.2012).<br>ಶ್ರೀ. ಬೇತೂರಮಠ ಇವರ ವಯೋ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ. (ನಿವೃತ್ತಿ ದಿ:30.04.2014). |
| 4 | ಗಣಿತಶಾಸ್ತ್ರ | 01 | ಪ.ಜಾ. | ಶ್ರೀ. ಕೆ.ಜಿ. ಗುರುಮೂರ್ತಿಇವರ ವಯೋ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ. (ನಿವೃತ್ತಿ ದಿ:31.08.2004). |
| 5 | ಭೌತಶಾಸ್ತ್ರ | 01 | ಪ.ಜಾ. | ಶ್ರೀ. ಆರ್. ಶಿವಾನಂದ ಇವರ ವಯೋ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ. (ನಿವೃತ್ತಿ ದಿ:29.02.2012). |
| 6 | ರಸಾಯನಶಾಸ್ತ್ರ | 02 | ಪ.ಜಾ-1<br>ಜಿ.ಎಂ.-1 | ಶ್ರೀ ಸುಧಾಂಶುಮೌಳಿ ಇವರ ವಯೋ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ. (ನಿವೃತ್ತಿ ದಿ:30.11.2010).<br>ಶ್ರೀ.ಈ ರಾಜಣ್ಣ ಇವರ ವಯೋ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ. (ನಿವೃತ್ತಿ ದಿ:31.08.2014). |
| 7 | ಸಸ್ಯಶಾಸ್ತ್ರ | 01 | ಏಕವ್ಯಕ್ತಿ ವಿಭಾಗ ಮೀಸಲಾತಿ ಅನ್ವಯಿಸುವುದಿಲ್ಲ | ಶ್ರೀ ಬಿ.ಬಿ. ನಂದ್ಯಾಲ್ ಇವರ ವಯೋ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ. (ನಿವೃತ್ತಿ ದಿ:31.07.2010). |
| 8 | ದೈಹಿಕ ಶಿಕ್ಷಣ ನಿರ್ದೇಶಕರು | 01 | ಏಕವ್ಯಕ್ತಿ ವಿಭಾಗ ಮೀಸಲಾತಿ ಅನ್ವಯವಾಗುವುದಿಲ್ಲ | ಶ್ರೀ. ವೀರೇಗೌಡ ಇವರ ವಯೋ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ. (ನಿವೃತ್ತಿ ದಿ:31.01.2012) |

ನಿಬಂಧನೆಗಳು:

1) ಅಭ್ಯರ್ಥಿಗಳು ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ 55% ಅಂಕಗಳನ್ನು ಪಡೆದಿರಬೇಕು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಶೇಕಡ 50 ಅಂಕಗಳು) ಮತ್ತು ಎನ್.ಇ.ಟಿ/ ಎಸ್.ಎಲ್.ಇ.ಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಪಿ.ಹೆಚ್.ಡಿ ಪದವಿಯನ್ನು ಕೋರ್ಸ್‌ವರ್ಕ್‌ನೊಂದಿಗೆ ಪಡೆದ ಅಭ್ಯರ್ಥಿಗಳಿಗೆ ಎನ್.ಇ.ಟಿ/ಎಸ್.ಎಲ್.ಇ.ಟಿ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ. ದಿನಾಂಕ:11.07.2009ರ ನಂತರದ ಯಾವುದೇ ನೇಮಕಾತಿಗೆ ಎಂ.ಫಿಲ್. ವಿದ್ಯಾರ್ಹತೆ ಪರಿಗಣಿಸತಕ್ಕದ್ದಲ್ಲ.
2) ಪ್ರತಿಯೊಂದು ಹುದ್ದೆಯನ್ನು ಜಾಹೀರಾತುಗೊಳಿಸುವ ಮುನ್ನ ಹುದ್ದೆಗೆ ನಿಗದಿತ ಕನಿಷ್ಠ ಕಾರ್ಯಭಾರ ಅಂದರೆ ಪ್ರಯೋಗಾಲಯ ತರಗತಿಗಳನ್ನು ಹೊಂದಿರುವ ವಿಷಯಗಳಲ್ಲಿ 20 ಗಂಟೆ ಮತ್ತು ಪ್ರಯೋಗಾಲಯ ತರಗತಿಗಳನ್ನು ಹೊಂದಿಲ್ಲದ ವಿಷಯಗಳಲ್ಲಿ 16 ಗಂಟೆ ಕಾರ್ಯಭಾರ ಕಡ್ಡಾಯವಾಗಿರಬೇಕು. ನಿಗದಿತ ಕಾರ್ಯಭಾರ ಇಲ್ಲದಿರುವ ಹುದ್ದೆಗಳನ್ನು ಭರ್ತಿ ಮಾಡತಕ್ಕದ್ದಲ್ಲ.
3) ಸದರಿ ಹುದ್ದೆಗಳು ಅನುಮೋದಿತ ಹಾಗೂ ಮಂಜೂರಾದ (ನಿವೃತ್ತಿ. ಮರಣ. ರಾಜೀನಾಮೆ ಮತ್ತು ಸ್ವಯಂ ನಿವೃತ್ತಿಯಿಂದ ತೆರವಾಗಿರುವ) ಹುದ್ದೆಗಳಾಗಿರಬೇಕು.
4) ಮೇಲ್ಕಂಡ ಹುದ್ದೆಗಳಲ್ಲಿ ಯಾರಾದರೂ ಅರೆಕಾಲಿಕ ಸ್ಟಾಪ್-ಗ್ಯಾಪ್ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದು. ಅವರುಗಳು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು. ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇದ್ದಲ್ಲಿ. ಅಂತಹ ಹುದ್ದೆಗಳನ್ನು ಭರ್ತಿ ಮಾಡುವಾಗ ನ್ಯಾಯಾಲಯದ ಆದೇಶದ ಪ್ರಕಾರ ಮತ್ತು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಬೇಕು.

Scanned with CamScanner

೫) ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಜಾಹೀರಾತನ್ನು ರಾಜ್ಯಮಟ್ಟದ ಎರಡು ಪ್ರಮುಖ (ಕನ್ನಡ ಮತ್ತು ಇಂಗ್ಲೀಷ್) ದಿನಪತ್ರಿಕೆಗಳಲ್ಲಿ ಪ್ರಕಟಪಡಿಸುವುದು.

೬) ನೇಮಕಾತಿ ನಿಯಮದಂತೆ ಅಭ್ಯರ್ಥಿಗಳು ಕನಿಷ್ಠ ಮತ್ತು ಗರಿಷ್ಠ ವಯೋಮಿತಿ ಒಳಗೆ ಇರಬೇಕು (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ & ಕ್ಯಾಟಗರಿ-1 ಗರಿಷ್ಠ 40, ಇತರೆ ಹಿಂದುಳಿದ ವರ್ಗ ಗರಿಷ್ಠ ೩೮ ಹಾಗೂ ಸಾಮಾನ್ಯ ವರ್ಗ ಗರಿಷ್ಠ ೩೫ ವರ್ಷಗಳು).

7) ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಉಲ್ಲೇಖ (೩)ರ ಆದೇಶದಲ್ಲಿ ತಿಳಿಸಿರುವಂತೆ ಆಯ್ಕೆ ಸಮಿತಿ ರಚನೆ ಮಾಡಿ ಸಂದರ್ಶನ ನಡೆಸಿ, ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕದ್ದು.

ತಮ್ಮ ವಿಶ್ವಾಸಿ,

ಕಾಲೇಜು ಶಿಕ್ಷಣ ಆಯುಕ್ತರು

**ಪ್ರತಿಯನ್ನು:**

1) ಅಧ್ಯಕ್ಷರು/ಕಾರ್ಯದರ್ಶಿಗಳು, ಶ್ರೀ ಜಗದ್ಗುರು ಪಂಚಾಚಾರ್ಯ ವಿಶ್ವಧರ್ಮ ವಿದ್ಯಾಪೀಠ (ರಿ), ಹರಿಹರ -577601
2) ಪ್ರಾಂಶುಪಾಲರು, ಎಸ್.ಜೆ.ವಿ.ಪಿ. ಸ್ವಯತ್ತ ಪದವಿ ಕಾಲೇಜು, ಹರಿಹರ -577601
೩) ಕಛೇರಿ ಪ್ರತಿ.

Scanned with CamScanner